**ಕರ್ನಾಟಕ ಲೋಕಾಯುಕ್ತ**

**ಕಂಪ್ಲೆಂಟ್/ಉಪಲೋಕ್/ಬಿಸಿಡಿ/1824/2021/ಪಿಓ.ಎ.ಆರ್.ಇ-5**

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 24/02/2022.

**ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ: 1) ಶ್ರೀ. ಹೆಚ್.ಓಂಕಾರಪ್ಪ ಬಿನ್ ಕದೀರಪ್ಪ, ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)-20, (ನಿವೃತ್ತ) ವಾಣಿಜ್ಯ ತೆರಿಗೆ ಅಪರ ಆಯುಕ್ತರ ಕಛೇರಿ, ವಾಣಿಜ್ಯ ತೆರಿಗೆ ಕಾರ್ಯಾಲಯ, ಕೋರಮಂಗಲ, ಬೆಂಗಳೂರು,**

**2) ಶ್ರೀ. ಮಾಣಿಕ್ಯಂ ಆರ್. ಬಿನ್. ಎಂ.ರಾಮಸ್ವಾಮಿ, ವಾಹನ ಚಾಲಕ, (ನಿವೃತ್ತ) ವಾಣಿಜ್ಯ ತೆರಿಗೆ ಅಪರ ಆಯುಕ್ತರ ಕಛೇರಿ, ದಕ್ಷಿಣ ವಲಯ ಜಾರಿ, ಕೋರಮಂಗಲ, ಬೆಂಗಳೂರು,**

ಆದ ನೀವು ಸರ್ಕಾರಿ/ ಸಾರ್ವಜನಿಕ ನೌಕರರಾಗಿದ್ದು ಸರ್ಕಾರಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ದುರ್ನಡತೆ ತೋರಿದ ಕುರಿತಂತೆ ನಿಮ್ಮ ಮೇಲೆ ಶಿಸ್ತುಕ್ರಮ ಜರುಗಿಸುವ ಬಗ್ಗೆ.

****

1. ಆರಕ್ಷಕ ನಿರೀಕ್ಷಕರು ಭ್ರಷ್ಟಾಚಾರ ನಿಗ್ರಹದಳ ಪೋಲೀಸ್ ಠಾಣೆ ಬೆಂಗಳೂರು ನಗರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಸಲಾಗಿ. **ಶ್ರೀ. ಹೆಚ್.ಓಂಕಾರಪ್ಪ ಬಿನ್ ಕದೀರಪ್ಪ, ವಾಣಿಜ್ಯ ತೆರಿಗೆ ಅಧಿಕಾರಿ (ಜಾರಿ)-20, (ನಿವೃತ್ತ) ವಾಣಿಜ್ಯ ತೆರಿಗೆ ಅಪರ ಆಯುಕ್ತರ ಕಛೇರಿ, ವಾಣಿಜ್ಯ ತೆರಿಗೆ ಕಾರ್ಯಾಲಯ, ಕೋರಮಂಗಲ, ಬೆಂಗಳೂರು, 2) ಶ್ರೀ. ಮಾಣಿಕ್ಯಂ ಆರ್. ಬಿನ್. ಎಂ.ರಾಮಸ್ವಾಮಿ, ವಾಹನ ಚಾಲಕ, (ನಿವೃತ್ತ) ವಾಣಿಜ್ಯ ತೆರಿಗೆ ಅಪರ ಆಯುಕ್ತರ ಕಛೇರಿ, ದಕ್ಷಿಣ ವಲಯ ಜಾರಿ, ಕೋರಮಂಗಲ, ಬೆಂಗಳೂರು,** (ಇನ್ನು ಮುಂದೆ ಕ್ರಮವಾಗಿ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಆದ ನಿಮ್ಮ ಮೇಲೆ **ಶ್ರೀ. ಮಹೇಂದ್ರಕುಮಾರ್ ಬಿನ್ ರಂಜಿತ್‌ಮಲ್, ಮೆ: ಬ್ರೈಟ್ ರೋಡ್ ಲಾಜಿಸ್ಟಿಕ್ಸ್, ಚಾಮರಾಜಪೇಟೆ, ಬೆಂಗಳೂರು** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ ದಿ: 12/10/2016 ರಂದು ದೂರುದಾರರ ಟ್ರಾನ್ಸ್‌ಪೋರ್ಟ್ ಕಂಪನಿಗೆ ಸೇರಿದ ಟಿಎನ್-42-ಎಂ-3814 ಲಾರಿಯಲ್ಲಿ ತಮಿಳುನಾಡಿನ ತಿರುಪೂರಿನ ಮೆ: ರಾಜ್ ಹೊಸೈರೀಸ್ ಕಂಪನಿಯ ರೆಡಿಮೇಡ್ ಬಟ್ಟೆಗಳನ್ನು ಲೋಡ್ ಮಾಡಿಸಿದ್ದು, ಸದರಿ ಲೋಡ್‌ಅನ್ನು ಡೆಲ್ಲಿಗೆ ಕಳುಹಿಸಿಕೊಡಬೇಕಿದ್ದು, ಸದರಿ ಲಾರಿಗೆ ಡೆಲ್ಲಿ ಪರ್ಮಿಟ್ ಇಲ್ಲದ ಕಾರಣ ಲಾರಿಯನ್ನು ದಿ: 13/10/2016 ರಂದು ಮದ್ಯಾಹ್ನ ಬೆಂಗಳೂರಿನ ನಮ್ಮ ಟ್ರಾನ್ಸ್‌ಪೋರ್ಟ್ ಕಚೇರಿಗೆ ತರಿಸಿಕೊಂಡು, ಸದರಿ ಲಾರಿಯಲ್ಲಿದ್ದ ಲೋಡನ್ನು

ನಮ್ಮ ಕಂಪನಿಯ ಮತ್ತೊಂದು ಲಾರಿಗೆ ಅನ್‌ಲೋಡ್ ಮಾಡಿಸುವ ಪ್ರಯತ್ನದಲ್ಲಿದ್ದ ಸಮಯದಲ್ಲಿ ಎದುರುದಾರರು ದೂರುದಾರರ ಲಾರಿಯನ್ನು ಮಾಲಿನ ಸಮೇತ ಕೋರಮಂಗಲದ ತಮ್ಮ ಕಚೇರಿಗೆ ತೆಗೆದುಕೊಂಡು ಹೋಗಿ 1,17,900/- ರೂ. ದಂಡವನ್ನು ಹಾಕಿದ್ದು, ಅದನ್ನು ತುಂಬಿದ ನಂತರ ಕೆ-ನೋಟಿಸ್ ಹಾಗೂ ಪೆನಾಲ್ಟಿ ಆದೇಶವನ್ನು ನೀಡಲು ಕೋರಿದಾಗ, ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟ ಬಗ್ಗೆ, ದೂರು ಸಲ್ಲಿಸಿದ್ದು, ಸದರಿ ದೂರು ಬೆಂಗಳೂರು ನಗರ ಎ.ಸಿ.ಬಿ ಪೋಲಿಸ್ ಠಾಣಾ ಗುನ್ನಾ ನಂ. 16/2016 ರಲ್ಲಿ ದಾಖಲಾಗಿದ್ದು, ತನಿಖಾಧಿಕಾರಿಗಳು ತನಿಖೆಯನ್ನು ಪೂರೈಸಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಕಲಂ 7, 13(1) (ಡಿ), ರೆ/ವಿ 13(2) ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೋಷಾರೋಪಣ ಪಟ್ಟಿಯನ್ನು ಪರಿಶೀಲಿಸಲಾಗಿ 2ನೇ ಎದುರುದಾರರು ಸರ್ಕಾರಿ ನೌಕರರಾಗಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ಲಂಚಕ್ಕೆ ಬೇಡಿಕೆ ಇಟ್ಟು, 1ನೇ ಎದುರುದಾರರು 47,000/-ರೂ. ಲಂಚವನ್ನು ಸ್ವೀಕರಿಸುವ ಕಾಲಕ್ಕೆ ರೆಡ್‌ಹ್ಯಾಂಡಾಗಿ ಸಿಕ್ಕು ದುರ್ನಡತೆ ತೋರಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

**2.ಎದುರುದಾರರ ಮೇಲಿನ ಆಪಾದನೆಯ ಸಂಕ್ಷಿಪ್ತ ಸಾರಾಂಶ:**

i) ದೂರುದಾರರಾದ **ಶ್ರೀ. ಮಹೇಂದ್ರಕುಮಾರ್ ಬಿನ್ ರಂಜಿತ್‌ಮಲ್, ಮೆ: ಬ್ರೈಟ್ ರೋಡ್ ಲಾಜಿಸ್ಟಿಕ್ಸ್, ಚಾಮರಾಜಪೇಟೆ, ಬೆಂಗಳೂರು** ಇವರು ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ ದಿ: 12/10/2016 ರಂದು ದೂರುದಾರರ ಟ್ರಾನ್ಸ್‌ಪೋರ್ಟ್ ಕಂಪನಿಗೆ ಸೇರಿದ ಟಿಎನ್-42-ಎಂ-3814 ಲಾರಿಯಲ್ಲಿ ತಮಿಳುನಾಡಿನ ತಿರುಪೂರಿನ ಮೆ: ರಾಜ್ ಹೊಸೈರೀಸ್ ಕಂಪನಿಯ ರೆಡಿಮೇಡ್ ಬಟ್ಟೆಗಳನ್ನು ಲೋಡ್ ಮಾಡಿಸಿದ್ದು, ಸದರಿ ಲೋಡನ್ನು ಡೆಲ್ಲಿಗೆ ಕಳುಹಿಸಿಕೊಡಬೇಕಿದ್ದು, ಆ ಲಾರಿಗೆ ಡೆಲ್ಲಿ ಪರ್ಮಿಟ್ ಇಲ್ಲದ ಕಾರಣ ಲಾರಿಯನ್ನು ದಿ: 13/10/2016 ರಂದು ಮದ್ಯಾಹ್ನ ಬೆಂಗಳೂರಿನ ನಮ್ಮ ಟ್ರಾನ್ಸ್‌ಪೋರ್ಟ್ ಕಚೇರಿಗೆ ತರಿಸಿಕೊಂಡು, ಸದರಿ ಲಾರಿಯಲ್ಲಿದ್ದ ಲೋಡನ್ನು ನಮ್ಮ ಕಂಪನಿಯ ಮತ್ತೊಂದು ಲಾರಿಗೆ ಅನ್‌ಲೋಡ್ ಮಾಡಿಸುವ ಪ್ರಯತ್ನದಲ್ಲಿದ್ದ ಸಮಯದಲ್ಲಿ ಎದುರುದಾರರು ದೂರುದಾರರ ಲಾರಿಯನ್ನು ಮಾಲಿನ ಸಮೇತ ಕೋರಮಂಗಲದ ತಮ್ಮ ಕಚೇರಿಗೆ ತೆಗೆದುಕೊಂಡು ಹೋಗಿ 1,17,900/- ರೂ. ದಂಡವನ್ನು ಹಾಕಿದ್ದು, ದಿ: 25/10/2016 ರಂದು ದಂಡ ತುಂಬಿದ ನಂತರ ಕೆ-ನೋಟಿಸ್ ಹಾಗೂ ಪೆನಾಲ್ಟಿ ಆದೇಶವನ್ನು ನೀಡಲು ಕೋರಿದಾಗ, 1ನೇ ಎದುರುದಾರರು ತಮ್ಮ ವಾಹನ ಚಾಲಕನಾದ 2ನೇ ಎದುರುದಾರರ ಮೂಲಕ 20,000/- ರೂ. ಲಂಚಕ್ಕೆ ಬೇಡಿಕೆ ಇಟ್ಟು, ಅಂದೇ ದೂರುದಾರರು 2ನೇ ಎದುರುದಾರರ ಕೈಯಲ್ಲಿ 3,000/- ರೂ. ನೀಡಿ, ಉಳಿದ 17,000/-ವನ್ನು ನಂತರ ಕೊಡುವುದಾಗಿ ಹೇಳಿ ಬಂದಿದ್ದು, ಸದರಿ ಹಣ ಕೊಡುವುದು ತಡವಾದ್ದರಿಂದ 2ನೇ ಎದುರುದಾರರು ದೂರುದಾರರ ಟ್ರಾನ್ಸ್‌ಪೋರ್ಟ್ ಕಚೇರಿಯ ಬಳಿ

ಬಂದು ಅಲ್ಲಿದ್ದ ಒಂದು ಸ್ಕ್ರಾಪ್ ಟೆಂಪೋವನ್ನು ಹಿಡಿದು, ಅದನ್ನು ಬಿಡಲು 30,000/- ರೂ. ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟು ಒಟ್ಟಾರೆಯಾಗಿ 47,000/- ರೂ. ಲಂಚಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಈ ವಿಚಾರದಲ್ಲಿ ದಿ: 03/11/2016 ರಂದು 1 ಮತ್ತು 2ನೇ ಎದುರುದಾರರ ಜೊತೆ ಮೊಬೈಲ್‌ನಲ್ಲಿ ಮಾತನಾಡಿದ್ದು, ಸದರಿಯವರು ಲಂಚಕ್ಕೆ ಬೇಡಿಕೆಯಿಟ್ಟ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii) ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ದಿ: 04/11/2016 ರಂದು ಬೆಂಗಳೂರು ನಗರ ಎಸಿಬಿ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ.16/2016 ರಲ್ಲಿ ಕಲಂ 7, 13(1) (ಡಿ), ರೆ/ವಿ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಮದನ್‌ಕುಮಾರ್ (ನೆರಳುಸಾಕ್ಷಿ) 2) ರವಿಕುಮಾರ್ ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರುಗಳ ಸಮಕ್ಷಮ ದೂರುದಾರರು ಸಿ.ಡಿ.ಯನ್ನು ಹಾಜರುಪಡಿಸಿದ್ದು, ಅದರಲ್ಲಿದ್ದ ಸಂಭಾಷಣೆಯನ್ನು ತಮ್ಮ ಸಿಬ್ಬಂದಿಗಳ ಮೂಲಕ ಲಿಪಿಕರಿಸಿಕೊಂಡು, ಸಿ.ಡಿ.ಯನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆಯಿಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ ರೂ. 47,000/- (1000x47) ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಪಂಚರು ತಾಳೆ ಮಾಡಿ ಖಾತರಿ ಪಡಿಸಿಕೊಂಡಿರುತ್ತಾರೆ. ಪೊಲೀಸ್ ಸಿಬ್ಬಂದಿ ನೋಟುಗಳಿಗೆ ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ-2 ರವಿಕುಮಾರ್‌ರವರ ಮೂಲಕ ದೂರುದಾರರ ಪ್ಯಾಂಟ್ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ರವಿಕುಮಾರ್‌ರವರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರಿನ ಗುಣಧರ್ಮವನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳುಸಾಕ್ಷಿಯಾದ ಮದನ್‌ಕುಮಾರ್ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ಕನ್ನಡಕವನ್ನು ತೆಗೆದು ಹಾಕಿಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ಈ ಎಲ್ಲಾ

ಘಟನಾವಳಿಗಳನ್ನು ದಿ: 04-11-2016 ರಂದು ಸಾಯಂಕಾಲ 5.30 ರಿಂದ ರಾತ್ರಿ 8.30 ಘಂಟೆಯವರೆಗೆ ಬೆಂಗಳೂರು ನಗರ ಎಸಿಬಿ ಕಛೇರಿಯಲ್ಲಿ ಬರೆದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iii) ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದಾಳಿ ತಂಡದವರು, ಈಗಾಗಲೇ ಎದುರುದಾರರು ದೂರುದಾರರಿಗೆ ತಿಳಿಸಿದಂತೆ ತಾನು ಗಸ್ತು ಕರ್ತವ್ಯದಲ್ಲಿ ಇರುವುದರಿಂದ ಚಾಮರಾಜಪೇಟೆಯ ಮಕ್ಕಳಕೂಟದ ಹತ್ತಿರ ಬರಲು ತಿಳಿಸಿದಂತೆ ರಾತ್ರಿ 9.50 ಘಂಟೆ ಸುಮಾರಿಗೆ ಮಕ್ಕಳಕೂಟದ ಹತ್ತಿರ ಬಂದು ಕಾಯಲಾಗಿ, ಸುಮಾರು ರಾತ್ರಿ 11.15 ಘಂಟೆಯಾದರೂ ಅಲ್ಲಿ ಎದುರುದಾರರು ಕಂಡಿಲ್ಲವಾದ್ದರಿಂದ ಎದುರುದಾರರಿಗೆ, ಫೋನ್ ಮಾಡಲಾಗಿ ಬನ್ನೇರುಘಟ್ಟ ರಸ್ತೆ ಟೋಲ್ ಬಳಿ ಬರಲು ತಿಳಿಸಿದ್ದು, ಅಲ್ಲಿಯೂ 1ನೇ ಎದುರುದಾರರು ಕಂಡಿಲ್ಲವಾದ್ದರಿಂದ, ಪುನ: 1ನೇ ಎದುರುದಾರರಿಗೆ ಫೋನ್ ಮಾಡಲಾಗಿ, ನೈಸ್ ರಸ್ತೆ ಟೋಲ್‌ನಿಂದ ಬನ್ನೇರುಘಟ್ಟ ರಸ್ತೆಯಲ್ಲಿ ನೇರವಾಗಿ ಮುಂದಕ್ಕೆ ಬರುವಂತೆ ತಿಳಿಸಿದ್ದರಿಂದ, ದಾಳಿತಂಡದವರು 1ನೇ ಎದುರುದಾರರು ಹೇಳಿದ ಜಾಗದ ಹತ್ತಿರ ಬಂದಿರುತ್ತಾರೆ. ಬನ್ನೇರುಘಟ್ಟ ರಸ್ತೆಯ ಶೇರ್‌ವುಡ್ ಶಾಲೆಯ ಮುಖ್ಯಗೇಟಿನ ಕಾಂಪೌಂಡ್ ಪಕ್ಕದಲ್ಲಿ ವಾಣಿಜ್ಯ ತೆರಿಗೆ ಇಲಾಖೆಯ ವಾಹನವು ನಿಂತಿದ್ದರಿಂದ ದಾಳಿತಂಡದವರು ತಮ್ಮ ವಾಹನವನ್ನು ಗುಪ್ತವಾಗಿ ಸ್ವಲ್ಪ ದೂರದಲ್ಲಿ ನಿಲ್ಲಿಸಿ, ನೆರಳುಸಾಕ್ಷಿ ಹಾಗೂ ದೂರುದಾರರನ್ನು 1ನೇ ಎದುರುದಾರರ ವಾಹನದ ಹತ್ತಿರ ಕಳುಹಿಸಿದ್ದು, ವಾಹನದಲ್ಲಿ 1ನೇ ಎದುರುದಾರರು, ವಾಣಿಜ್ಯ ತೆರಿಗೆ ನಿರೀಕ್ಷಕರಾದ ಶ್ರೀಕಾಂತ್, ಚಾಲಕ ಶ್ರೀನಿವಾಸ, ಡಿ-ಗ್ರೂಪ್ ನೌಕರ ನಾರಾಯಣಸ್ವಾಮಿ ಇದ್ದು, ಜಾಗೃತ ವಾಹನದಲ್ಲಿ ಕುಳಿತ 1ನೇ ಎದುರುದಾರರು ದೂರುದಾರರಿಂದ ಸುಮಾರು ಬೆಳಗಿನ ಝಾವ 12.30 ಘಂಟೆ ಸಮಯದಲ್ಲಿ ಹಣವನ್ನು ಕೇಳಿ ಪಡೆದುಕೊಂಡಿರುತ್ತಾರೆ. ಹಣ ಪಡೆದುಕೊಂಡ ನಂತರ ದೂರುದಾರರು ಸಂಜ್ಞೆ ಮಾಡಿದ್ದು, ತಕ್ಷಣ ದಾಳಿತಂಡದವರು ಸ್ಥಳಕ್ಕೆ ಬಂದಿದ್ದು, ಇವರನ್ನು ನೋಡಿ 1ನೇ ಎದುರುದಾರರು ಹಣವನ್ನು ಜಾಗೃತವಾಹನದ ಸೀಟಿನ ಕೆಳಭಾಗದಲ್ಲಿ ಹಾಕಿರುತ್ತಾರೆ. ದಾಳಿತಂಡದವರು ತಮ್ಮ ಪರಿಚಯ ಮಾಡಿಕೊಂಡು ತನಿಖೆಗೆ ಸಹಕರಿಸುವಂತೆ ಎದುರುದಾರರಿಗೆ ತಿಳಿಸಿರುತ್ತಾರೆ. 1ನೇ ಎದುರುದಾರರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಹಣದ ಬಗ್ಗೆ ವಿಚಾರಿಸಲಾಗಿ, ಲಂಚದ ಹಣವನ್ನು ಸೀಟಿನ ಕೆಳಭಾಗದಲ್ಲಿ ಹಾಕಿರುವುದಾಗಿ ತಿಳಿಸಿದ್ದರಿಂದ, ತನಿಖಾಧಿಕಾರಿಗಳ ಸೂಚನೆ ಮೇರೆಗೆ ಪಂಚರು ಸದರಿ ನೋಟುಗಳ ನಂಬರ್‌ಗಳನ್ನು ತಾಳೆಮಾಡಿ ನೋಡಲಾಗಿ ನೋಟುಗಳ ನಂಬರುಗಳು ತಾಳೆಯಾದ ಮೇರೆಗೆ ತನಿಖಾಧಿಕಾರಿಗಳು ಹಣವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳ ಬಗ್ಗೆ ವಿಚಾರಿಸಲಾಗಿ ದಾಖಲಾತಿಗಳು ಕಚೇರಿಯಲ್ಲಿ ಇರುವುದಾಗಿ ತಿಳಿಸಿದ್ದರಿಂದ ಮತ್ತು ಸದರಿ

ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಲು ಸೌಲಭ್ಯವಿಲ್ಲವಾದ್ದರಿಂದ, 1ನೇ ಎದುರುದಾರರ ಕಚೇರಿಗೆ ಬಂದಿರುತ್ತಾರೆ. ದಾಖಲಾತಿಗಳು 2ನೇ ಎದುರುದಾರರ ಹತ್ತಿರ ಇದ್ದ ಕಾರಣ, ರಶೀದಿ ಪುಸ್ತಕವನ್ನು ಮಾತ್ರ ಪಡೆದುಕೊಂಡಿರುತ್ತಾರೆ. 1ನೇ ಎದುರುದಾರರ ರಕ್ಷಣಾ ಹೇಳಿಕೆಯನ್ನು ಪಡೆದುಕೊಂಡಿದ್ದು, ಅದರಲ್ಲಿ ದೂರುದಾರರು ಬಲವಂತವಾಗಿ ಹಣವನ್ನು ಕೈ ಮೇಲೆ ಹಾಕಿರುವುದಾಗಿ ಹಾಗೂ ತನಗೆ ಆರೋಗ್ಯ ಸರಿಯಿಲ್ಲದ ಕಾರಣ, ಘಟನೆಯ ಬಗ್ಗೆ ಸ್ಪಷ್ಟ ಜ್ಞಾನ ಇರುವುದಿಲ್ಲವೆಂದು ರಕ್ಷಣಾ ಹೇಳಿಕೆ ಬರೆದುಕೊಟ್ಟಿದ್ದು, ಅದನ್ನು ನೆರಳುಸಾಕ್ಷಿ ಹಾಗೂ ದೂರುದಾರರು ಅಲ್ಲಗಳೆದಿದ್ದಾರೆ. 1ನೇ ಎದುರುದಾರರಿಗೆ ದೂರುದಾರರು ಲಂಚ ನೀಡುವ ಕಾಲಕ್ಕೆ ತಮ್ಮ ಮೊಬೈಲ್‌ನಿಂದ ಮೂರು ಬಾರಿ ಕರೆ ಮಾಡಿದ್ದು, ಅದನ್ನು ತನಿಖಾಧಿಕಾರಿಗಳು ಲಿಪಿಕರಿಸಿಕೊಂಡಿರುತ್ತಾರೆ. ದೂರುದಾರರು ತಮ್ಮ ಮೊಬೈಲ್‌ನಲ್ಲಿ ಮಹತ್ವದ ಫೈಲ್‌ಗಳಿರುವುದರಿಂದ ಸಂಭಾಷಣೆಯ ಸಿ.ಡಿ.ಯನ್ನು ತಾನೇ ಕೊಡುವುದಾಗಿ ಹೇಳಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿ: 05/11/2016 ರಂದು ಬೆಳಗಿನ ಝಾವ 1.50 ರಿಂದ 6.00 ಗಂಟೆಯವರೆಗೆ ಕೋರಮಂಗಲದ ವಾಣಿಜ್ಯ ತೆರಿಗೆ ಕಾರ್ಯಾಲಯದಲ್ಲಿ ಬರೆದ ಟ್ರ್ಯಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

ದಿ: 07/11/2016 ರಂದು ದೂರುದಾರರು ರಾತ್ರಿ ಲಂಚ ನೀಡುವ ಕಾಲಕ್ಕೆ ತಮ್ಮ ಮೊಬೈಲ್‌ನಿಂದ 1ನೇ ಎದುರುದಾರರ ಮೊಬೈಲ್‌ಗೆ ಫೋನ್ ಮಾಡಿದ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿ, ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಅದನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ.

ದಿ: 21/11/2016 ರಂದು ಬೆಂಗಳೂರು ನಗರ ಎಸಿಬಿ ಕಚೇರಿಯಲ್ಲಿ 1 ಮತ್ತು 2ನೇ ಎದುರುದಾರರ ಮಾದರಿ ಧ್ವನಿಯನ್ನು ಲಂಚಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯ ಲಿಪಿಯನ್ನು 6 ಬಾರಿ ಓದಿಸುವ ಮೂಲಕ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ದಿ: 21/11/2016 ರಂದು 1ನೇ ಎದುರುದಾರರು ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿಗಳು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ.

iv) ತನಿಖಾ ಕಾಲದಲ್ಲಿ 1ನೇ ಎದುರುದಾರರ ಎರಡೂ ಕೈಗಳನ್ನು ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದು ರಾಸಾಯನಿಕ ಪರೀಕ್ಷಾ ವರದಿಯಿಂದ ಕಂಡುಬರುತ್ತದೆ.

v) ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. 1ನೇ ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. 1 ಮತ್ತು 2ನೇ ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರಹೊಂದಿದ ಪ್ರಾಧಿಕಾರದಿಂದ ಸದರಿಯವರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

3. 1 ಮತ್ತು 2ನೇ ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ಸಲ್ಲಿಸಿದ್ದು, 1ನೇ ಎದುರುದಾರರು ತಮ್ಮ ಸಮಜಾಷಿಯಲ್ಲಿ ಬರೆದುಕೊಂಡ ಅಂಶವೇನೆಂದರೆ, ದಿ: 13/10/2016 ರಂದು ಮೆ: ಬ್ರೈಟ್ ರೋಡ್ ಲಾಜಿಸ್ಟಿಕ್ ಇವರು ವಾಣಿಜ್ಯ ತೆರಿಗೆ ಸುಂಕವನ್ನು ತಪ್ಪಿಸಿ, ತಮಿಳುನಾಡಿನಿಂದ ರೆಡಿಮೇಡ್ ಬಟ್ಟೆಯನ್ನು ತರಿಸಿ, ಮಾರಾಟ ಮಾಡುತ್ತಾರೆಂದು ಬಂದ ಮಾಹಿತಿ ಮೇರೆಗೆ ಚಾಮರಾಜಪೇಟೆಯಲ್ಲಿರುವ ಮೆ: ಬ್ರೈಟ್ ರೋಡ್ ಲಾಜಿಸ್ಟಿಕ್ ಇವರ ಬುಕ್ಕಿಂಗ್ ಕಚೇರಿ ಹತ್ತಿರ ಹೋಗಿ, ತಪಾಸಣೆ ಮಾಡಲಾಗಿ, ಲಾರಿ ನಂ: ಟಿಎನ್-42-ಎಂ-3814 ರಲ್ಲಿದ್ದ ಗಾರ್ಮೆಂಟ್ಸ್‌ಗಳನ್ನು ಮಿನಿ ಲಾರಿಗಳಲ್ಲಿ ಬೀಕರಿ ಮಾಡುತ್ತಿರುವುದು ಕಂಡ ಬಂದಿದ್ದು, ಲಾರಿ ಚಾಲಕ ಗಣೇಶ್ ಇವರನ್ನು ವಿಚಾರ ಮಾಡಲಾಗಿ, ವಾಣಿಜ್ಯ ಸುಂಕದ ಚೆಕ್‌ಪೋಸ್ಟ್‌ಗಳನ್ನು ತಪ್ಪಿಸಿ, ಕಳ್ಳ ಹಾದಿಯಲ್ಲಿ ಬಂದಿರುವ ವಿಷಯ ತಿಳಿಯಿತು. ಮಾಲ ಸಮೇತ ಲಾರಿಯನ್ನು ಜಪ್ತಿ ಮಾಡಿ, ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಲು ಚಾಲಕನಿಗೆ ನೋಟಿಸ್ ನೀಡಲಾಯಿತು. ದಿ: 25/10/2016 ರಂದು ಚಾಲಕನು ದಂಡ ತುಂಬುವುದಾಗಿ ತಿಳಿಸಿದ್ದರಿಂದ ರೂ. 1,17,900/- ದಂಡವನ್ನು ನಿಗದಿ ಮಾಡಲಾಯಿತು. ಇನ್ಸ್‌ಪೆಕ್ಟರ್ ಶ್ರೀಕಾಂತ್ ಇವರು ದಂಡದ ರಸೀದಿಯನ್ನು ಬರೆದು ನೀಡಲಾಗಿ, ದೂರುದಾರರಾದ ಮಹೇಂದ್ರ ಕುಮಾರ್ ಇವರು ಒಂದು ಲಕ್ಷ ರೂಪಾಯಿ ತಂದಿದ್ದು, ಉಳಿದ ಹಣವನ್ನು ಕಚೇರಿಗೆ ಹೋಗಿ ಕಳುಹಿಸುವುದಾಗಿ ನಂತರ ಕೆ-ನೋಟಿಸ್‌ನ್ನು ತೆಗೆದುಕೊಳ್ಳುವುದಾಗಿ ಹೇಳಿ ಹೋಗಿರುತ್ತಾರೆ. ಅವರ ಮಾತನ್ನು ನಂಬಿ ರಶೀದಿಯನ್ನು ವಾಪಸ್ಸು ಪಡೆಯಲಿಲ್ಲ. ಇದೆಲ್ಲಾ ಸಂಗತಿ ಸಾಯಂಕಾಲ 4:30 ಕ್ಕೆ ನಡೆದಿದ್ದು, ಅದೇ ದಿನ ಸಾಯಂಕಾಲ ನನಗೆ ಮೈಯಲ್ಲಿ ಹುಷಾರು ಇಲ್ಲವಾದ್ದರಿಂದ ಜೋಷಿ ಆಸ್ಪತ್ರೆಗೆ ದಾಖಲಾದೆ. ಹೀಗಾಗಿ ಕೆ-ನೋಟಿಸ್ ತಯಾರಿಸಲಿಲ್ಲ. ಜೋಷಿ ಆಸ್ಪತ್ರೆ ಹಾಗೂ ಬೇರೆ ಬೇರೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದು 26/10/2016 ರಿಂದ 28/10/2016 ರವರೆಗೆ 3 ದಿನಗಳ ರಜೆಯ ಮೇಲೆ ಇರುತ್ತೇನೆ. ಚಿಕಿತ್ಸೆ ಪಡೆದ ಬಗ್ಗೆ ದಾಖಲೆಗಳ **ಅನುಬಂಧ-1** ರಂತೆ ಜೆರಾಕ್ಸ್ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ. ರಜೆ ಮಂಜೂರಾದ ಬಗ್ಗೆ **ಅನುಬಂಧ-2** ರಂತೆ ಜೆರಾಕ್ಸ್ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ. ರಶೀದಿ ಹಾಕಿದ್ದರಿಂದ ರೂ. 1,17,900/- ಖಜಾನೆಗೆ ತುಂಬಿರುತ್ತೇನೆ. ದಿ: 03/11/2016 ರಂದು ಮಹೇಂದ್ರ ಕುಮಾರ್ ಇವರು ನನಗೆ ಕರೆ ಮಾಡಿ ಕೆ-ನೋಟಿಸ್ ಕೊಡಲು ಕೇಳಿದ್ದು, ಅದಕ್ಕೆ ನಾನು ರೂ. 17,900/- ಸುಂಕದ ಬಾಕಿ ಹಣವನ್ನು ಕೊಡಲು ತಿಳಿಸಿ, ಮಾಸ್ Inspection ಇದ್ದುದರಿಂದ ನಂತರದಲ್ಲಿ ಮಾತನಾಡುವುದಾಗಿ ತಿಳಿಸಿರುತ್ತೇನೆ. ದಿ: 04/11/2016 ರಂದು ರಾತ್ರಿ ತಪಾಸಣೆಗಾಗಿ ಗಸ್ತು ಹೋಗುತ್ತಿರುವಾಗ ರಾತ್ರಿ 11:00 ಗಂಟೆಗೆ ಫೋನ್

ಮಾಡಿ ತಾನು 15 ದಿನಗಳ ಅವಧಿಗೆ ರಾಜಸ್ಥಾನಕ್ಕೆ ಹೋಗಬೇಕಾಗಿರುವುದರಿಂದ ಸುಂಕದ ಬಾಕಿ ಹಣವನ್ನು ಕೊಡಲು ನಾನು ಇರುವ ಸ್ಥಳವನ್ನು ಕೇಳಿದ, ನಾನು ಇರುವ ಸ್ಥಳವನ್ನು ಹೇಳಿದೆ. ಬಾಕಿ ಸುಂಕದ ಹಣವನ್ನು ಕೊಡುವ ನೆಪದಲ್ಲಿ ಲಂಚ ಕೇಳಿದೆನೆಂದು ಸುಳ್ಳು ದೂರು ನೀಡಿ ಟ್ರ್ಯಾಪ್ ಮಾಡಿಸಿರುತ್ತಾರೆ. ಈತನ ಮೇಲೆ ನೂರಾರು ಪ್ರಕರಣಗಳು ದಾಖಲಾಗಿರುತ್ತವೆ. ದೂರುದಾರರು ಸುಂಕ ತಪ್ಪಿಸುವ ಚಾಳಿಕೋರ ದಂಧೆಗಾರನಾಗಿರುತ್ತಾನೆ. ಆತನು ದಂಡ ಪಾವತಿಸಿದ ಬಗ್ಗೆ ದಾಖಲೆಗಳನ್ನು ಪಡೆದುಕೊಂಡಿದ್ದು, ಅವುಗಳ ಜೆರಾಕ್ಸ್ ಪ್ರತಿಗಳನ್ನು **ಅನುಬಂಧ-3** ರಂತೆ ಹಾಜರುಪಡಿಸಿರುತ್ತಾರೆ. ಎ.ಸಿ.ಬಿ. ಪೋಲೀಸ್‌ರು ಸರಿಯಾಗಿ ಪರಾಮರ್ಶಿಸದೇ ಕೇಸ್ ದಾಖಲಿಸಿರುತ್ತಾರೆ. ಸಂಭಾಷಣೆಗಳಲ್ಲಿ ರೂ. 17,900/- ಹಣದ ಬಗ್ಗೆ ಮಾತನಾಡಿರುವುದು ಸ್ಪಷ್ಟವಾಗಿರುತ್ತದೆ. ರಸೀದಿಯಲ್ಲಿ ರೂ. ಹದಿನೇಳು ಸಾವಿರದ ಚಿಲ್ಲರೆ ಬಾಕಿ ಕಟ್ಟುವುದು ನಮೂದು ಇರುತ್ತದೆ. ಇದನ್ನೆಲ್ಲಾ ಪೊಲೀಸ್‌ರು ಗಣನೆಗೆ ತೆಗೆದುಕೊಳ್ಳದೇ ಸುಳ್ಳು ಕೇಸ್ ದಾಖಲಿಸಿದ್ದಾರೆ. ನನ್ನ ಮತ್ತು ಮಹೇಂದ್ರ ಕುಮಾರ್ ಮತ್ತು ಮಾಣಿಕ್ಯಂ ಇವರ ಮೊಬೈಲ್ ಕರೆಗಳನ್ನು ಪರಿಶೀಲಿಸಿದಲ್ಲಿ, ಮಹೇಂದ್ರ ಕುಮಾರ್‌ನೇ ಎಲ್ಲಾ ಕರೆಗಳನ್ನು ಮಾಡಿರುವುದು ಕಂಡು ಬರುತ್ತದೆ. ದೂರುದಾರನು ಹೆಣೆದ ಸಂಚಿನ ಅರಿವಿಲ್ಲದೇ ನಾನು ಸಹಜವಾಗಿ ಬಾಕಿ ದಂಡದ ಹಣದ ವಿಷಯವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಮಾತನಾಡಿದ್ದೇನೆ. ದೂರುದಾರನು ಹಣವನ್ನು ಬಲವಂತದಿಂದ ನನ್ನ ಕೈಗೆ ತುರುಕಲು ಪ್ರಯತ್ನಿಸಿದ್ದು, ನೋಟುಗಳು ಕೆಳಗಡೆ ಬಿದ್ದಿರುತ್ತವೆ. ಅದನ್ನು ಎ.ಸಿ.ಬಿ. ಅಧಿಕಾರಿಗಳು ನನ್ನ ಕೈಯಿಂದ ಎತ್ತಿಸಿ, ನನ್ನ ಕೈ ತೊಳೆದಿದ್ದಾರೆ. ಟ್ರ್ಯಾಪ್ ಮುಗಿದ ನಂತರ ನನ್ನ ಮನೆಯನ್ನು ಶೋಧನೆ ಮಾಡಿದ್ದು, ನಗದು ರೂ. 10,800/- ಬಿಟ್ಟರೆ ಅಪರಾಧಿಕರಿಸುವ ಯಾವುದೇ ಮಾಲು ಸಿಕ್ಕಿರುವುದಿಲ್ಲ. ದೂರುದಾರರು ಹುಬ್ಬಳ್ಳಿ, ಝುಳಕಿ ಹಾಗೂ ಇತರೆ ಚೆಕ್‌ಪೋಸ್ಟ್‌ಗಳಲ್ಲಿ ವಾಣಿಜ್ಯ ಸುಂಕ ತಪ್ಪಿಸಿ, ಸಾಗಾಣಿಕೆ ಮಾಡಿದ ಅಪರಾಧಕ್ಕೆ ದಂಡ ತುಂಬಿದ್ದಾರೆ. ಈ ಮಾಹಿತಿಯನ್ನು ನನ್ನ ವಕೀಲರಾದ ಯೋಗೇಶ್ ಇವರ ಮೂಲಕ ಮಾಹಿತಿ ಹಕ್ಕು ಅಡಿಯಲ್ಲಿ ಪಡೆದುಕೊಳ್ಳಲು ಅರ್ಜಿ ಸಲ್ಲಿಸಿದ್ದು, ಅದಕ್ಕೆ ದೂರುದಾರರು ಮಾಹಿತಿ ಒದಗಿಸಿದಲ್ಲಿ ತನಗೆ ಹಾಗೂ ತನ್ನ ಕುಟುಂಬದವರಿಗೆ ಅಪಾಯವಿದೆ ಎಂದು ತಿಳಿಸಿ, ಮಾಹಿತಿಯನ್ನು ನೀಡದಿರಲು ಮನವಿ ಮಾಡಿಕೊಂಡಿರುತ್ತಾರೆ. ಇದಕ್ಕೆ ಸಂಬಂಧಿಸಿದ ಜೆರಾಕ್ಸ್ ಪ್ರತಿಗಳನ್ನು **ಅನುಬಂಧ-4** ರಂತೆ ಸಲ್ಲಿಸಿರುತ್ತಾರೆ. ಮಾಹಿತಿ ಹಕ್ಕಿನ ಅಡಿಯಲ್ಲಿ ಮಾಹಿತಿ ಪಡೆದುಕೊಳ್ಳಲು ನಮ್ಮ ವಕೀಲರು ಸಲ್ಲಿಸಿದ ಅರ್ಜಿ ಹಾಗೂ ನೀಡಿದ ಮಾಹಿತಿ ಹಾಗೂ ಆರೋಗ್ಯ ತಪಾಸಣೆಯ ವರದಿಗಳನ್ನು **ಅನುಬಂಧ-5** ರಂತೆ ಸಲ್ಲಿಸಿರುತ್ತಾರೆ. ಈ ಮೇಲ್ಕಂಡ ಕಾರಣಗಳಿಂದಾಗಿ ಅಮಾಯಕನಾದ ನನ್ನ ಮೇಲೆ ಇಲಾಖಾ ವಿಚಾರಣೆಯನ್ನು ನಡೆಸಬಾರದೆಂದು ವಿನಂತಿಸಿಕೊಂಡಿದ್ದಾರೆ.

2ನೇ ಎದುರುದಾರರು ತಮ್ಮ ಸಮಜಾಷಿಯಲ್ಲಿ ಬರೆದುಕೊಂಡ ಅಂಶವೇನೆಂದರೆ, ದೂರುದಾರರು ರಿಡಿಮೇಡ್ ಉಡುಪುಗಳನ್ನು ಪರಮಿಟ್ ಇಲ್ಲದೆ ದೆಹಲಿಗೆ ಸಾಗಾಣಿಕೆ ಮಾಡಲು ಪ್ರಯತ್ನ ಮಾಡುತ್ತಿದ್ದಾಗ, ಸದರಿ ಲಾರಿಯನ್ನು ವಶಕ್ಕೆ ಪಡೆದು, ದಂಡ ಪಾವತಿ ಮಾಡಿದ ನಂತರ ಕೆ-ನೋಟಿಸ್ ಮತ್ತು ಪೆನಾಲ್ಟಿ ಆದೇಶದ ಪ್ರತಿಗಳನ್ನು ನೀಡಲು ದೂರುದಾರರು ಕೇಳಿದಾಗ ನನ್ನ ಕೈಯಲ್ಲಿ

ರೂ. 20,000/- ನೀಡುವಂತೆ 1ನೇ ಎದುರುದಾರರು ಹೇಳಿರುತ್ತಾರೆ ಎನ್ನುವುದು ಮತ್ತು ಅಂದೇ ನನಗೆ ದೂರುದಾರರು ರೂ. 3,000/- ನೀಡಿರುತ್ತಾರೆ ಮತ್ತು ನಾನು ಟ್ರಾನ್ಸ್‌ಪೋರ್ಟ್ ಕಚೇರಿಗೆ ಭೇಟಿ ನೀಡಿದಾಗ ಸ್ಕ್ರಾಪ್ ಮೆಟಿರಿಯಲ್ಸ್ ತುಂಬಿದ ಟೆಂಪೋವನ್ನು ಹಿಡಿದು ಅದನ್ನು ಬಿಡಲು ರೂ. 30,000/- ಲಂಚಕ್ಕೆ ಬೇಡಿಕೆ ಇಟ್ಟಿರುವುತ್ತೇನೆ ಎನ್ನುವುದು ಸುಳ್ಳು. ವಾಹನ ವಶಪಡಿಸಿಕೊಳ್ಳಲು ಹಾಗೂ ವಾಹನವನ್ನು ಬಿಡಲು ನನಗೆ ಅಧಿಕಾರವಿರುವುದಿಲ್ಲ. ನನ್ನ ಮೇಲೆ ಇರುವ ಆಪಾದನೆಗಳನ್ನು ಊಹೆಯ ಮೇರೆಗೆ ಸಿದ್ದಪಡಿಸಲಾಗಿದೆ. ಅದಕ್ಕೆ ಪೂರಕ ಸಾಕ್ಷಿಗಳು ಇರುವುದಿಲ್ಲ. ನಾನು ಲಂಚದ ಹಣಕ್ಕೆ ಬೇಡಿಕೆ ಇಟ್ಟಿಲ್ಲ. ದಿ: 03/11/2011 ರಂದು ದೂರುದಾರರೊಂದಿಗೆ ಲಂಚ ನೀಡುವ ಬಗ್ಗೆ ಫೋನ್‌ನಲ್ಲಿ ಸಂಭಾಷಣೆ ಮಾಡಿಲ್ಲ. ನಾನು ಸ್ಕ್ರಾಪ್ ತುಂಬಿದ ಟೆಂಪೋ ಬಿಡಲು ರೂ. 30,000/- ಲಂಚಕ್ಕೆ ಬೇಡಿಕೆ ಇಟ್ಟಿರುವುದಿಲ್ಲ. ಟೆಂಪೋ ವಾಹನದ ನಂಬರ್, ಚಾಲಕನ ಹೆಸರು ಹಾಗೂ ಟೆಂಪೋ ಯಾವ ಕಂಪನಿಗೆ ಸೇರಿದೆ ಎಂಬ ಬಗ್ಗೆ ದೂರಿನಲ್ಲಿ ಮಾಹಿತಿ ಇರುವುದಿಲ್ಲ. ದೂರುದಾರರು ತೆರಿಗೆ ವಂಚಿಸಿದ್ದನ್ನು ಪತ್ತೆ ಮಾಡಿ, ಅನೇಕ ಬಾರಿ ತೆರಿಗೆ ವಸೂಲಿ ಮಾಡಿದ್ದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಸುಳ್ಳು ದೂರು ಸಲ್ಲಿಸಿದ್ದಾರೆ. ನನ್ನ ಮೇಲೆ ಯಾವುದೇ ಟ್ರ್ಯಾಪ್ ಕ್ರಮ ಜರುಗಿಲ್ಲ. ನಾನು 04/11/2016 ರಿಂದ 09/11/2016 ರವರೆಗೆ ರಜೆಯ ಮೇರೆಗೆ ಹೋಗಿರುತ್ತೇನೆ. ಈ ಬಗ್ಗೆ **ಅನುಬಂಧ-1** ರಂತೆ ಜೆರಾಕ್ಸ್ ಪ್ರತಿ ಲಗತ್ತಿಸಿರುತ್ತಾರೆ. ನಾನು 30/1/2018 ರಂದು ಸೇವೆಯಿಂದ ನಿವೃತ್ತಿಯಾಗಿರುತ್ತೇನೆ. ಈ ಬಗ್ಗೆ **ಅನುಬಂಧ-2** ರಂತೆ ಜೆರಾಕ್ಸ್ ಪ್ರತಿ ಲಗತ್ತಿಸಿರುತ್ತಾರೆ. ದಿ: 04/01/2016 ರಂದು ನನ್ನ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಾಗಿರುತ್ತದೆ. ಘಟನೆ ನಡೆದು 4 ವರ್ಷ ಹಳೆಯ ಪ್ರಕರಣವಾಗಿರುವುದರಿಂದ ಕೆ.ಸಿ.ಎಸ್.ಆರ್ 214(2) (ಬಿ) ಅಡಿಯಲ್ಲಿ ಇಲಾಖಾ ವಿಚಾರಣೆಗೆ ನಡೆಸಲು ಅವಕಾಶವಿರುವುದಿಲ್ಲ. ನಿವೃತ್ತಿಯಾಗುವಂತಹ ಅಧಿಕಾರಿಗಳ ಮೇಲೆ ಕೈಗೊಂಡ ತನಿಖೆಗಳನ್ನು ಸರ್ಕಾರದ ಆದೇಶ ದಿ: 24/05/1984ರ ಪ್ರಕಾರ ನಿವೃತ್ತಿಯಾಗುವುದಕ್ಕಿಂತ ಮುಂಚೆ ಇತ್ಯರ್ಥ ಪಡಿಸಬೇಕು. ಈ ಬಗ್ಗೆ **ಅನುಬಂಧ-3** ರಂತೆ ಜೆರಾಕ್ಸ್ ಪ್ರತಿ ಲಗತ್ತಿಸಿರುತ್ತಾರೆ. ನಾನು ನಿವೃತ್ತಿಯಾಗಿರುವುದರಿಂದ ತನಿಖೆ ಮಾಡಲು ಕಾನೂನಿನ ಪ್ರಕಾರ ಬರುವುದಿಲ್ಲ. ಸರ್ಕಾರದ ಆದೇಶ ದಿ: 16/08/1983 ರಂತೆ ಸರ್ಕಾರಕ್ಕೆ ಆರ್ಥಿಕ ಹಾನಿ ಉಂಟು ಮಾಡುವ ಆಪಾದನೆಗಳನ್ನು ಹೊರತುಪಡಿಸಿ ಉಳಿದ ಇಲಾಖಾ ವಿಚಾರಣೆಗಳನ್ನು ನಿವೃತ್ತಿಗಿಂತ ಮೊದಲೇ ಪೂರ್ಣಗೊಳಿಸುವಂತೆ ಹೊರಡಿಸಿದ ಆದೇಶವನ್ನು **ಅನುಬಂಧ-4** ರಂತೆ ಹಾಜರುಪಡಿಸಿದ್ದಾರೆ. ದಿ: 21/01/2019 ರ ಸುತ್ತೋಲೆ **ಅನುಬಂಧ-5** ರ ಪ್ರಕಾರ ನಿವೃತ್ತಿ ಹೊಂದಿದ ನೌಕರರ ವಿರುದ್ಧ ಹೊಸದಾಗಿ ಇಲಾಖಾ ವಿಚಾರಣೆ ನಡೆಸಲು ಅವಕಾಶವಿರುವುದಿಲ್ಲ. ಏಕೆಂದರೆ, ನಾನು ಈಗ ಸರ್ಕಾರಿ ನೌಕರನಲ್ಲ ಮತ್ತು ಕೆ.ಸಿ.ಎಸ್.ಆರ್ ನನಗೆ ಅನ್ವಯವಾಗುವುದಿಲ್ಲ. ಈ ಮೇಲ್ಕಂಡ ಕಾರಣಗಳಿಂದ ಮತ್ತು ಘಟನೆ ನಡೆದು 4 ವರ್ಷ ಆಗಿರುವುದರಿಂದ ತನ್ನ ಮೇಲೆ ವಿಚಾರಣೆ ನಡೆಸಲು ಕಾನೂನಿನಲ್ಲಿ ಅವಕಾಶವಿಲ್ಲವಾದ್ದರಿಂದ ವಿಚಾರಣೆಯನ್ನು ಕೈಬಿಡಬೇಕೆಂದು ನಿವೇದಿಸಿಕೊಂಡಿದ್ದಾರೆ.

4. ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾಧಾರಗಳನ್ನು ಪರಾಂಭರಿಸಲಾಗಿ, ಎದುರುದಾರರು ಮೇಲ್ಕಂಡಂತೆ ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ.

ತನಿಖಾ ಕಾಲದಲ್ಲಿ ಸಂಗ್ರಹಿಸಿದ ಸಾಕ್ಷ್ಯಾಧಾರಗಳನ್ನು ನಂಬದಿರಲು ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ನಿಲುವುಗಳನ್ನು ಒಪ್ಪಲು ಈ ಹಂತದಲ್ಲಿ ಬಲವಾದ ಹಾಗೂ ಸಮಂಜಸವಾದ ಆಧಾರಗಳಿರುವುದಿಲ್ಲ. ಕರ್ನಾಟಕ ಉಚ್ಚ ನ್ಯಾಯಾಲಯಾದ ಡಬ್ಲ್ಯೂ.ಪಿ ನಂ. 19386/16 ರಲ್ಲಿ ಆದ ಆದೇಶದನ್ವಯ ನ್ಯಾಯಾಲಯಕ್ಕೆ ಸಲ್ಲಿಸಿದ ದೋಷಾರೋಪಣಾ ಪಟ್ಟಿಗಳ ಪತ್ರಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ನ್ಯಾಯಾಲಯದಲ್ಲಿ ರೀಟ್ ಅರ್ಜಿ ಪಿಡಿಂಗ್ ಇದ್ದ ಅವಧಿಯನ್ನು ವ್ಯವಕಲನ ಮಾಡಿದಲ್ಲಿ ಕಾಲಮಿತಿಯ ಬಾದಾ ಉದ್ಭವಿಸುವುದಿಲ್ಲ. ಅಲ್ಲದೆ ಸರ್ವೋಚ್ಚ ನ್ಯಾಯಾಲಯವು ಕೋವಿಡ್–19 ಸಾಂಕ್ರಾಮಿಕ ಖಾಯಿಲೆ ಕಾರಣದಿಂದಾಗಿ ದಿ: 15/03/2020 ರಿಂದ 28/02/2022 ವರೆಗೆ ಕಾಲಮಿತಿ ಲೆಕ್ಕ ಹಾಕುವುದರಿಂದ ವಿನಾಯತಿ ನೀಡಲಾಗಿರುತ್ತದೆ. ಈ ಕಾರಣದಿಂದಲೂ ಕೂಡ ಎದುರುದಾರರು ತೆಗೆದುಕೊಂಡ ಕಾಲಮಿತಿಯ ನಿಲುವು ಕಾನೂನಿನ ಪ್ರಕಾರ ಉರ್ಜಿತವಾಗುವುದಿಲ್ಲ ಮತ್ತು ಈ ಹಂತದಲ್ಲಿ ಕಾಲಮಿತಿಯ ನಿಲುವನ್ನು ಪರಿಗಣಿಸಲು ಬರುವುದಿಲ್ಲ.

5. ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆ ಹಾಗೂ ಶ್ರದ್ಧೆಯನ್ನು ಹೊಂದಿರದೆ ಮೇಲ್ಕಂಡಂತೆ ಭ್ರಷ್ಟಾಚಾರವೆಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಕ.ನಾ.ಸೇ. (ನಡತೆ) ನಿಯಮ, 1966, 3(1) (i) to (iv) ರ ಅನ್ವಯ ಶಿಸ್ತುಕ್ರಮಕ್ಕೆ ಒಳಪಡಲು ಬಾಧ್ಯರಾಗಿರುತ್ತಾರೆ.

6. 1 ಮತ್ತು 2ನೇ ಎದುರುದಾರರು 2018ನೇ ಸಾಲಿನಲ್ಲಿ ನಿವೃತ್ತಿಯಾಗಿದ್ದು, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕೆ.ಸಿ.ಎಸ್.ಆರ್. 214 (2)(ಬಿ)(i) ರ ಅಡಿಯಲ್ಲಿ ಅನುಮತಿ ನೀಡಿ, ಅದೇ ನಡತೆ ನಿಯಮ 214 (2)(ಬಿ)(iii) ಅನ್ವಯ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ಅನ್ವಯ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ 3 ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

24/2/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.